## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ.ಕೆ.ಭಾಸ್ಕರ್, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ಹಾಗೂ ಇನ್ನಿತರರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ :-1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರ ಅ.ಸ.ಪತ್ರ ಸಂಖ್ಯೆ : Compt / Uplok / Mys-3350/ 2015 / DRE-4, ದಿನಾಂಕ. 31.07.2018.

2. ಮಾನ್ಯ ಉಪಲೋಕಾಯುಕ್ತರವರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ12(3)ರ ವರದಿ ಸಂಖ್ಯೆ : Compt / Uplok / Mys-3350 / 2015 / ಉನಿವಿ-4 ದಿನಾಂಕ. 18.06.2018.

*****

ಪ್ರಸ್ತಾವನೆ :

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 31.07.2018ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮಾನ್ಯ ಉಪಲೋಕಾಯುಕ್ತರವರ ದಿನಾಂಕ : 18.06.2018ರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-1ರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಶ್ರೀ ಜೆ ರಾಮನಾಯಕ, ಜಿಲ್ಲಾಧ್ಯಕ್ಷರು, ಜಿಲ್ಲಾ ನಾಯಕರ ಯುವ ವೇದಿಕೆ, ಮೈಸೂರು, ಇವರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ದೂರಿನಲ್ಲಿ ಸರ್ಕಾರಿ ಆದೇಶದಂತೆ ಪರಿಶಿಷ್ಟ ಜಾತಿ/ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ವಯ ತುಂಡು ಗುತ್ತಿಗೆ ಕಾಮಗಾರಿ ನೀಡಿರುವುದಿಲ್ಲವೆಂದು, ಜಿಲ್ಲಾ ಪಂಚಾಯತ್‌ನ ಸದಸ್ಯರು ಮತ್ತು ತಾಲ್ಲೂಕು ಪಂಚಾಯತ್‌ನ ಸದಸ್ಯರು ಸಿಫಾರಸ್ಸು ಮಾಡಿದ ಗುತ್ತಿಗೆದಾರರಿಗೆ ಮಾತ್ರ ಕಾಮಗಾರಿಯನ್ನು ನೀಡಿರುತ್ತಾರೆಂದು, ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಕೋರಿ ನೀಡಿರುವ ಅರ್ಜಿ ಹಾಗೂ ಕಾಮಗಾರಿ ನೀಡುವಂತೆ ಅಧಿಕಾರಿಗಳು ಶಿಫಾರಸ್ಸು ಮಾಡಿರುವ ಪತ್ರ ಎರಡೂ ಒಂದೇ ಪತ್ರದಲ್ಲಿರುತ್ತದೆ ಎಂದು, ಸ್ವತ: ಅಧಿಕಾರಿಗಳೇ ಗುತ್ತಿಗೆದಾರರ ತುಂಡು ಗುತ್ತಿಗೆ ಕಾಮಗಾರಿ ಕೋರಿ ಅರ್ಜಿ ನೀಡಿದಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆಂದು, ತುಂಡು ಗುತ್ತಿಗೆ ಕಾಮಗಾರಿ ಕೋರಿ ಗುತ್ತಿಗೆದಾರರು ಸಲ್ಲಿಸಿರುವ ಅರ್ಜಿಯಲ್ಲಾಗಲೀ ದಿನಾಂಕ ನಮೂದಾಗಿಲ್ಲವೆಂದು, ಒಬ್ಬನೇ ಗುತ್ತಿಗೆದಾರನಿಗೆ ಒಂದೇ ಅರ್ಜಿಗೆ ಒಂದೆ ದಿನಾಂಕದಂದು ಅನೇಕ ತುಂಡು ಗುತ್ತಿಗೆ ಕಾಮಗಾರಿಯನ್ನು ನಿರ್ವಹಿಸುವಂತೆ ಕಾಮಗಾರಿ ಆದೇಶ ಪತ್ರ ನೀಡಿದೆ ಎಂದು ಹಾಗೂ

ಗುತ್ತಿಗೆದಾರರ ಸಹಿ ಹಾಕದ ಅರ್ಜಿಗೂ ಸಹ ತುಂಡು ಗುತ್ತಿಗೆ ಕಾಮಗಾರಿ ನೀಡಿದ್ದಾರೆಂದು ಆರೋಪಿಸಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ತನಿಖೆ ಕೈಗೊಳ್ಳುವಂತೆ ಕೋರಿರುತ್ತಾರೆ :-

1. ಶ್ರೀ ಎಂ.ಕೆ.ಭಾಸ್ಕರ್, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮೈಸೂರು.
2. ಶ್ರೀ ವಿ.ತಿಮ್ಮಯ್ಯ (ಪ್ರಸ್ತುತ ನಿವೃತ್ತ) ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೆ.ಆರ್.ನಗರ. ಮೈಸೂರು ಜಿಲ್ಲೆ.
3. ಶ್ರೀ ಹೆಚ್.ಎಲ್.ರಘು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ ಇಂಜಿನಿಯರಿಂಗ್ ಉಪವಿಭಾಗ ಮೈಸೂರು.
4. ಶ್ರೀ ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ನಂಜನಗೂಡು.
5. ಶ್ರೀ ಪಿ.ಲಕ್ಷ್ಮಣ ರಾವ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಟಿ.ನರಸೀಪುರ.
6. ಶ್ರೀ ನಾಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹೆಚ್.ಡಿ.ಕೋಟೆ.
7. ಶ್ರೀ ಮದನ್ ಮೋಹನ್ , ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕೆ.ಆರ್.ನಗರ
8. ಶ್ರೀ ಕೆ.ಬಸವರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಪಿರಿಯಾಪಟ್ಟಣ.
9. ಶ್ರೀ ಅನಂತಪದ್ಮನಾಭ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹುಣಸೂರು.

ಮಾನ್ಯ ಉಪಲೋಕಾಯುಕ್ತರವರು ಈ ಮೇಲಿನ ಆಪಾದಿತ ಅಧಿಕಾರಿ / ನೌಕರರಿಗೆ ದೂರಿನ ಪ್ರತಿಯನ್ನು ಕಳುಹಿಸಿ, ಅವರಿಂದ ಈ ಬಗ್ಗೆ ಉತ್ತರ / ಆಕ್ಷೇಪಣೆ ಸಲ್ಲಿಸುವಂತೆ ತಿಳಿಸಿದ್ದಕ್ಕೆ ಪ್ರತಿಯಾಗಿ ಆಪಾದಿತ ಅಧಿಕಾರಿ / ನೌಕರರು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ದೂರಿನ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಕಚೇರಿಯ ತನಿಖಾಧಿಕಾರಿಯವರು ತನಿಖೆಯನ್ನು ಕೈಗೊಂಡು ಸಲ್ಲಿಸಿದ ವರದಿಯಲ್ಲಿ ಸರ್ಕಾರದ ಆದೇಶದ ಪಾಲನೆ/ಅನುಷ್ಠಾನದ ಬಗ್ಗೆ ಉಸ್ತುವಾರಿ ಕ್ರಮ ಕೈಗೊಂಡಿರುವುದು/ಪ್ರಗತಿ ವರದಿಗಳನ್ನು ಪಡೆದಿರುವುದು ಎದುರುದಾರರ ಕಚೇರಿಯ ದಾಖಲೆಗಳಿಂದ ಕಂಡು ಬಂದಿರುವುದಿಲ್ಲವೆಂದು, ಪ್ರತ್ಯೇಕ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರು ನೀಡಿರಬಹುದಾದ ಇಚ್ಛಾ ಪತ್ರವನ್ನು ಸಂಬಂಧಪಟ್ಟ ಕಿರಿಯ/ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಕಾಮಗಾರಿಯನ್ನು ನಿರ್ವಹಿಸಲು ಅರ್ಹರಿರುವುದಾಗಿ

ಗುತ್ತಿಗೆದಾರರಿಗೆ ಶಿಫಾರಸ್ಸನ್ನು ನೀಡಿರುವುದು ಕಂಡುಬಂದಿರುತ್ತದೆಂದು, ಸದರಿ ಪ್ರಕರಣದಲ್ಲಿ ಯಾವುದೇ ನಿಯಮ ಬಾಹಿರ ಕ್ರಿಯೆ ಕಂಡುಬಂದಿರುವುದಿಲ್ಲವೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರು ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳು, ತನಿಖಾ ವರದಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಸಾರ್ವಜನಿಕ ಸರಕುಗಳು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಜಿದಾರರುಗಳಿಗೆ ಮೀಸಲಾತಿ ನೀಡುವ ಕುರಿತು ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: SWD 34 BCA 2004 ಬೆಂಗಳೂರು ದಿನಾಂಕ: 10.03.2005 ವನ್ನು ಹೊರಡಿಸಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಉಪಬಂಧದ ಮೂಲಕ ವಿನಾಯಿತಿ ನೀಡಲಾಗಿರುವ ಸಂಗ್ರಹಣೆಗೆ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಇರುವ ಸರ್ಕಾರಿ ಸ್ವಾಮ್ಯದ ವಿವಿಧ ಸಂಗ್ರಹಣೆ ಹಕ್ಕುಗಳಲ್ಲಿ ಕಾಮಗಾರಿಗಳ, ಸರಕುಗಳ ಹಾಗೂ ಸೇವೆಗಳು ಸಂಗ್ರಹಣೆಗೆ ರಾಜ್ಯ ಸರ್ಕಾರವು ಆದ್ಯತೆಯನ್ನು ಈ ಕೆಳಗಿನಂತೆ ನೀಡಿದೆ.

| | |
|---|---|
| ಅ) ಪರಿಶಿಷ್ಟ ಜಾತಿಗಳು | : ಶೇ.20 |
| ಆ) ಪರಿಶಿಷ್ಟ ಪಂಗಡಗಳು | : ಶೇ.05 |
| ಇ) ಇತರೆ ಹಿಂದುಳಿದ ವರ್ಗಗಳು | : ಶೇ.20 |
| ಈ) ಅಲ್ಪ ಸಂಖ್ಯಾತರು | : ಶೇ.05 |

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಯಲ್ಲಿ ವಿವಿಧ ಶೀರ್ಷಿಕೆಗಳಡಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಮೇಲೆ ಹೇಳಿದ ಸರ್ಕಾರದ ಆದೇಶದಂತೆ, ಇಲಾಖಾ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಮೊತ್ತದ ಅಭಿವೃದ್ಧಿ ಕಾಮಗಾರಿಗಳಲ್ಲಿ ನೊಂದಾಯಿತ ಗುತ್ತಿಗೆದಾರರುಗಳಿಗೆ ನಿಯಮಾನುಸಾರ ತುಂಡು ಗುತ್ತಿಗೆ ಮೇಲೆ ಕಡ್ಡಾಯವಾಗಿ ವಹಿಸಿಕೊಡುವಂತೆ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತದ ಎಲ್ಲಾ ಅಧಿಕ್ಷಕ ಅಭಿಯಂತರರಿಗೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಸಂ:ಮುಇಂ:ಪಂರಾಇಂಇ:ತಾಂಸ–2:ಸ.ಇಂ–2:2015–16 ರಲ್ಲಿ ಆದೇಶಿಸಿರುತ್ತಾರೆ.

ಸದರಿ ಆದೇಶದಂತೆ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಗುತ್ತಿಗೆದಾರರುಗಳಿಗೆ ತುಂಡು ಗುತ್ತಿಗೆಯಲ್ಲಿ 2014–15 ಮತ್ತು 2015–16ನೇ ಸಾಲಿನಲ್ಲಿ ಮಿಸಲಾತಿ ನೀಡಿರುವ ವಿವರಗಳಿರುವ ತಖ್ತೆಯು ಲಭ್ಯವಿದ್ದು. ಸದರಿ ತ:ಖ್ತೆಯನ್ವಯ ಮೈಸೂರು ವಿಭಾಗದ ಮೈಸೂರು, ಟಿ.ನರಸೀಪುರ ಮತ್ತು ನಂಜನಗೂಡು ಉಪವಿಭಾಗಗಳು ಹಾಗೂ ಕೆ.ಆರ್.ನಗರ ವಿಭಾಗದ ಕೆ.ಆರ್.ನಗರ, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ಮತ್ತು ಹುಣಸೂರು ಉಪವಿಭಾಗಗಳಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಮೊತ್ತದ ತುಂಡು ಗುತ್ತಿಗೆ ಕಾಮಗಾರಿಗಳನ್ನು ನೀಡುವಾಗ ಮೇಲೆ ಹೇಳಿದ ಸರ್ಕಾರದ ಆದೇಶವನ್ನು ಎದುರುದಾರರುಗಳು ಪಾಲಿಸದಿರುವುದು ಕಂಡು ಬಂದಿದೆ.

ಸದರಿ ದೂರಿನ ಎಲ್ಲಾ ಎದುರುದಾರರುಗಳು ಪಂಚಾಯತ್ ರಾಜ್ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಕಾರ್ಯಪಾಕ ಇಂಜಿನಿಯರ್‌ಗಳಾಗಿ 2014–15 ಮತ್ತು 2015–16ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮೈಸೂರು ಮತ್ತು ಕೆ.ಆರ್.ನಗರದಲ್ಲಿ

ಕಾರ್ಯನಿರ್ವಹಿಸಿದ್ದು, ಸದರಿಯವರುಗಳು ಸರ್ಕಾರದ ಆದೇಶ ಪಾಲನೆ ಕುರಿತು ಯಾವುದೇ ವಹಿ ಅಥವಾ ದಾಖಲೆಗಳನ್ನು ನಿರ್ವಹಿಸಿಲ್ಲ ಹಾಗೂ ಮೀಸಲಾತಿ ಆಧಾರದ ಮೇಲೆ ವಿವಿಧ ವರ್ಗಗಳಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುವ ಕಾಮಗಾರಿಗಳ ವಿವರ ನಮೂದಿಸಿರುವ ದಾಖಲೆ ಮತ್ತು ವಹಿಗಳನ್ನು ನಿರ್ವಹಿಸಿಲ್ಲವೆಂದು ಕಂಡು ಬಂದಿದೆ. ದಾಖಲೆಗಳನ್ವಯ ಅವರಿಗೆ ಕಾಮಗಾರಿಗಳನ್ನು ವಹಿಸಿಕೊಡಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಶಿಫಾರಸ್ಸು ಮಾಡಿ, ಕಾರ್ಯಪಾಲಕ ಅಭಿಯಂತರರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮೈಸೂರು ಮತ್ತು ಕೆ.ಆರ್.ನಗರಗಳ ಅಧೀನದ 7 ಉಪವಿಭಾಗಗಳಲ್ಲಿ 2014-15 ಮತ್ತು 2015-16ನೇ ಸಾಲಿನಲ್ಲಿ ಒಟ್ಟು 950 ಕಾಮಗಾರಿಗಳು ಅನುಷ್ಠಾನಗೊಂಡಿರುವುದು ಕಂಡು ಬಂದಿದೆ. ಸದರಿ ಕಾಮಗಾರಿಗಳ ತುಂಡು ಗುತ್ತಿಗೆ ವಹಿಸಿಕೊಡುವಾಗ ಮೇಲೆ ಹೇಳಿದ ಸರ್ಕಾರದ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡದಿರುವುದು ಕಂಡುಬಂದಿರುವುದರಿಂದ, ಸದರಿ ಆಪಾದಿತ ಅಧಿಕಾರಿ ನೌಕರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಈ ಪೈಕಿ ಶ್ರೀ ವಿ.ತಿಮ್ಮಯ್ಯ (ಪ್ರಸ್ತುತ ನಿವೃತ್ತ) ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೆ.ಆರ್.ನಗರ, ಶ್ರೀ ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ನಂಜನಗೂಡು ಮತ್ತು ಶ್ರೀ ಅನಂತಪದ್ಮನಾಭ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹುಣಸೂರು ಇವರು ಕ್ರಮವಾಗಿ ದಿನಾಂಕ: 30.04.2016, 31.07.2015 ಮತ್ತು 30.04.2015 ರಂದು ನಿವೃತ್ತಿ ಸೇವೆಯಿಂದ ಹೊಂದಿರುವುದರಿಂದ, ಸದರಿಯವರ ವಿರುದ್ಧ ವಿವರವಾದ ವಿಚಾರಣೆಯನ್ನು ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 214(2)(ಬಿ) ಅಡಿಯಲ್ಲಿ ಅನುಮತಿಯೊಂದಿಗೆ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಶಿಸ್ತು ಪ್ರಾಧಿಕಾರಕ್ಕೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತರವರು ಸಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಮೇಲ್ಕಂಡ ಎಲ್ಲಾ ಅಧಿಕಾರಿ/ನೌಕರರು ಸಾರ್ವಜನಿಕ ಸರಕುಗಳು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಜಿದಾರರುಗಳಿಗೆ ಮಿಸಲಾತಿ ನೀಡುವ ಕುರಿತು ಸರ್ಕಾರವು ಆದೇಶ ಸಂಖ್ಯೆ: SWD 34 BCA 2004 ಬೆಂಗಳೂರು ದಿನಾಂಕ: 10.03.2005 ರಂದು ಹೊರಡಿಸಿರುವ ಆದೇಶದನ್ವಯ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಉಪಬಂಧದ ಮೂಲಕ ವಿನಾಯಿತಿ ನೀಡಲಾಗಿರುವ ಸಂಗ್ರಹಣೆಗೆ ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಇರುವ ಸರ್ಕಾರಿ ಸ್ವಾಮ್ಯದ ವಿವಿಧ ಸಂಗ್ರಹಣೆ ಹಕ್ಕುಗಳಲ್ಲಿ ಕಾಮಗಾರಿಗಳ, ಸರಕುಗಳ ಹಾಗೂ ಸೇವೆಗಳು ಸಂಗ್ರಹಣೆಗೆ ರಾಜ್ಯ ಸರ್ಕಾರವು ನೀಡಿರುವ ಪರಿಶಿಷ್ಟ ಜಾತಿಗೆ ಶೇ.20, ಪರಿಶಿಷ್ಟ ಪಂಗಡಕ್ಕೆ ಶೇ.05, ಇತರೆ ಹಿಂದುಳಿದ ವರ್ಗಗಳಿಗೆ ಶೇ.20 ಮತ್ತು ಅಲ್ಪ ಸಂಖ್ಯಾತರಿಗೆ ಶೇ.05 ರಷ್ಟು ಮೀಸಲಾತಿಯನ್ನು ನಿಗಧಿಪಡಿಸಲಾಗಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮೈಸೂರು ಮತ್ತು ಕೆ.ಆರ್.ನಗರಗಳ ಅಧೀನದ 7 ಉಪವಿಭಾಗಗಳಲ್ಲಿ 2014-15 ಮತ್ತು 2015-16ನೇ ಸಾಲಿನಲ್ಲಿ ಒಟ್ಟು 950 ಕಾಮಗಾರಿಗಳು ಅನುಷ್ಠಾನಗೊಂಡಿರುವುದು ಕಂಡು ಬಂದಿದೆ. ಸದರಿ ಕಾಮಗಾರಿಗಳ ತುಂಡು ಗುತ್ತಿಗೆ ವಹಿಸಿಕೊಡುವಾಗ ಮೇಲ್ಕಂಡ ಸರ್ಕಾರದ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡದಿರುವುದು ದಾಖಲೆಗಳಿಂದ ಕಂಡುಬದಿರುತ್ತದೆ. ಆದ್ದರಿಂದ ಸದರಿ ಆಪಾದಿತರುಗಳು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ

ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ. ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) (i) (ii) & (iii)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡುಬರುತ್ತದೆ.

ಆದ್ದರಿಂದ, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ವಿವರವಾದ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-1ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 70 ಇಎನ್‌ಕ್ಯೂ 2018</u>**
**<u>ಬೆಂಗಳೂರು, ದಿನಾಂಕ : 25.08.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ :-

1. ಶ್ರೀ ಎಂ.ಕೆ.ಭಾಸ್ಕರ್, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮೈಸೂರು.
2. ಶ್ರೀ ಹೆಚ್.ಎಲ್.ರಘು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ ಇಂಜಿನಿಯರಿಂಗ್ ಉಪವಿಭಾಗ ಮೈಸೂರು.
3. ಶ್ರೀ ಪಿ.ಲಕ್ಷ್ಮಣ ರಾವ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಟಿ.ನರಸೀಪುರ.
4. ಶ್ರೀನಾಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹೆಚ್.ಡಿ.ಕೋಟೆ.
5. ಶ್ರೀ ಮದನ್ ಮೋಹನ್ , ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕೆ.ಆರ್.ನಗರ
6. ಶ್ರೀ ಕೆ.ಬಸವರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಪಿರಿಯಾಪಟ್ಟಣ.

ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು

ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(ಬಿ)(i)ರಡಿ ಅನುಮತಿ ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-11ರಂತೆ ವಿಚಾರಣೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-2 ಇವರಿಗೆ ವಹಿಸಿದೆ.

1. ಶ್ರೀ ವಿ.ತಿಮ್ಮಯ್ಯ (ಪ್ರಸ್ತುತ ನಿವೃತ್ತ) ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕೆ.ಆರ್.ನಗರ. ಮೈಸೂರು ಜಿಲ್ಲೆ.
2. ಶ್ರೀ ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ನಂಜನಗೂಡು.
3. ಶ್ರೀ ಅನಂತಪದ್ಮನಾಭ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹುಣಸೂರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/09/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :-

1. ಮಹಾಲೇಖಪಾಲರು, (ಲೆಕ್ಕಪತ್ರ ಅ & ಇ) ಕರ್ನಾಟಕ, ಬೆಂಗಳೂರು
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ / ಆರ್ಥಿಕ ಇಲಾಖೆ
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
6. ಸಂಬಂಧಪಟ್ಟ ಅಧಿಕಾರಿ / ನೌಕರರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ಮುಖಾಂತರ

ಪ್ರತಿಯನ್ನು :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
3. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ